ಪಿ.ಡಬ್ಲ್ಯೂ 1

ದಿನಾಂಕಃ 11-03-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು** ಃ ಶ್ರೀ ಎಂ ಎನ್ ವಕೀಲರು ಪ್ರತಿವಾದಿಯ ಪರವಾಗಿ ,

ನೀವು ನ್ಯಾಯದಕುಂಟೆ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಮಾಡುತ್ತಿದ್ದೀರಿ ಎಂದರೆ ಸರಿ . ನಿಮ್ಮ ಶಾಲಾದಾಖಲಾತಿಯಲ್ಲಿ ನಿಮ್ಮ ಹೆಸರು ಎನ್ ಎಸ್ ಕರಿಯಣ್ಣ ಬಿನ್ ಸಣ್ಣಪ್ಪ ಅಂತ ಇರುತ್ತದೆ ಎಂದರೆ ಸಾಕ್ಷಿಯು , ಕರಿಯಣ್ಣ ಅಂತ ಇರುತ್ತದೆ ಎಂದು ನುಡಿಯುತ್ತಾರೆ . ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ .

ನನಗೆ ನಿಡಗಲ್ ಬೆಟ್ಟದ ಬಳಿ ಜಮೀನಿರುವುದಿಲ್ಲ . ಸ ನಂ 45 ಜಮೀನನ್ನು ನಿಮ್ಮ ತಂದೆ ಮತ್ತು ನಿಮ್ಮ ಚಿಕ್ಕಪ್ಪ ಮಾರಾಟ ಮಾಡಿರುತ್ತೀರಿ ಎಂದರೆ ಸರಿಯಲ್ಲ . ಸ ನಂ 45 ಜಮೀನನ್ನು ಹೊನ್ನೂರಪ್ಪ , ನಿಮ್ಮ ತಂದೆ ಮತ್ತು ನಿಮ್ಮ ಚಿಕ್ಕಪ್ಪ ಮಾರಣ್ಣ ಮಾರಾಟ ಮಾಡಿರುತ್ತೀರಿ ಎಂದರೆ ಸರಿಯಲ್ಲ . ನನ್ನ ತಾತ ಹೊನ್ನೂರಪ್ಪ ನನಗೆ ಗೊತ್ತಿಲ್ಲ . ನನ್ನ ಚಿಕ್ಕಪ್ಪ ಮತ್ತು ನನ್ನ ತಾತನನ್ನು ನಾನು ನೋಡಿಲ್ಲ . ನನ್ನ ಚಿಕ್ಕಪ್ಪನ ಮಗನಾದ ಗುಂಡಣ್ಣನವರನ್ನು ನಾನು ನೋಡಿರುತ್ತೇನೆ . ನೀವು ಸ ನಂ 45 ಅನ್ನು ಮಾರಾಟ ಮಾಡಿ , ಸ ನಂ 64 ರ ಜಮೀನನ್ನು ಕ್ರಯಕ್ಕೆ ಪಡೆದಿರುತ್ತೀರಿ ಎಂದರೆ ಸರಿಯಲ್ಲ .

ಸ ನಂ 143/1 ಅನ್ನು ನನ್ನ ತಂದೆ ಮತ್ತು ಕೆಂಚಣ್ಣ ಸೇರಿ ಕ್ರಯಕ್ಕೆ ಪಡೆದಿರುತ್ತಾರೆ. ಸ ನಂ 143/1 ನಿಮ್ಮ ಚಿಕ್ಕಪ್ಪನಿಗೂ ಸಹ ಸೇರಿರುತ್ತದೆ ಎಂದರೆ ಸರಿಯಲ್ಲ . ಸ ನಂ 64 ಮತ್ತು 143/1 ಜಮೀನುಗಳನ್ನು ನಿಮ್ಮ ತಂದೆ ಒಟ್ಟು ಕುಟುಂಬದ ಪರವಾಗಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂದು ನುಡಿಯುತ್ತಾರೆ .

ಸ ನಂ 64 ಮತ್ತು 143/1 ಜಮೀನುಗಳು ನಿಮ್ಮ ತಂದೆ ಮತ್ತು ನಿಮ್ಮ ಚಿಕ್ಕಪ್ಪನಿಗೆ ಸೇರಿರುತ್ತವೆ ಎಂದರೆ ಸರಿಯಲ್ಲ . ನಾನು ಯಾವತ್ತೂ ಕರಿಯಣ್ಣ ಅಂತ ಮಾತ್ರ ಸಹಿ ಮಾಡುತ್ತೇನೆ . ಸಾಕ್ಷಿಗೆ ವಾದ ಪತ್ರವನ್ನು ತೋರಿಸಲಾಯಿತು , ಅದರ ಮೇಲಿನ ತನ್ನ ಸಹಿಯನ್ನು ಗುರುತಿಸಿದ್ದು , ಅದನ್ನು ನಿಡಿ 1 ಎಂದು , ಸಾಕ್ಷಿ ಸಹಿಯನ್ನು ನಿಡಿ1(ಎ) ಎಂದು ಗುರುತಿಸಲಾಯಿತು .

ಸಾಕ್ಷಿಗೆ ಒಂದು ಮೂಲ ನೊಂದಾಯಿತವಲ್ಲದ ದಿಃ 17-8-2007 ರಂದು ಮಾಡಲಾಗಿದೆ ಎನ್ನಲಾದ ಪಂಚಾಯತ್ ಪಾರಿಕತನ್ನು ತೋರಿಸಾಯಿತು , ಸಾಕ್ಷಿಯು ಅದನ್ನು ನೋಡಿ ಅದರಲ್ಲಿ ತನ್ನ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ . ಆ ಕಾರಣ ಸದರಿ ದಾಖಲಾತಿಯನ್ನು ನಿಶಾನೆಗೊಳಿಸಿಲ್ಲ . ಸಾಕ್ಷಿಗೆ ಒಂದು ಮೂಲ ನೊಂದಾಯಿತವಲ್ಲದ ದಿಃ 31-5-2011 ರಂದು ಮಾಡಲಾಗಿದೆ ಎನ್ನಲಾದ ದಾನಪತ್ರವನ್ನು ತೋರಿಸಾಯಿತು , ಸಾಕ್ಷಿಯು ಅದನ್ನು ನೋಡಿ ಅದರಲ್ಲಿ ತನ್ನ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ . ಆ ಕಾರಣ ಸದರಿ ದಾಖಲಾತಿಯನ್ನು ನಿಶಾನೆಗೊಳಿಸಿಲ್ಲ .

ನನಗೆ ಮಲ್ಲಣ್ಣ , ನಾಯಕರ ರಾಮಪ್ಪ , ಶ್ರೀನಿವಾಸ , ಗೌನರ್ , ಹೊನ್ನೂರಪ್ಪ ರವರು ಗೊತ್ತು , ಸದರಿ ವ್ಯಕ್ತಿಗಳು ನನ್ನೊಂದಿಗೆ ಚೆನ್ನಾಗಿದ್ದಾರೆ . ವಿಭಾಗ ಪತ್ರವನ್ನು ಬರೆದು , ಅದರಲ್ಲಿ ನಿಮಗೆ ಭಾಗ ನೀಡಲಾಗಿದೆ ಎಂದರೆ ಸರಿಯಲ್ಲ . ನಾವು ಜಮೀನುಗಳನ್ನು ಹಂಚಿಕೆ ಮಾಡಿಕೊಂಡಿರುವುದಿಲ್ಲ . ಸ ನಂ 71/1(ಬಿ) ಜಮೀನನ್ನು ಮುದ್ದರಂಪ್ಪನವರಿಂದ ಕ್ರಯಕ್ಕೆ ಪಡೆಯಲಾಗಿದೆ . ಸದರಿ ಜಮೀನು ನಿಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದರೆ ಸಾಕ್ಷಿಯು , ನನ್ನ ತಂದೆಗೆ 4 ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ .

ನನ್ನ ತಂದೆಗೆ 5 ಜನ ಹೆಣ್ಣು ಮಕ್ಕಳಿರುತ್ತಾರೆ , ಅವರೆಂದರೆ –ತಿಪ್ಪಮ್ಮ , ರುದ್ರಮ್ಮ , ಮಲ್ಲಮ್ಮ , ಮಾರಕ್ಕ , ಭೂಲಕ್ಷ್ಮಮ್ಮ ಅಂತ ಇರುತ್ತಾರೆ . ಅವರಲ್ಲಿ ತಿಪ್ಪಮ್ಮ ಮತ್ತು ಮಲ್ಲಮ್ಮ ಅಂತ ಇಬ್ಬರು ಹೆಣ್ಣು ಮಕ್ಕಳು ತೀರಿಕೊಂಡಿರುತ್ತಾರೆ . ತಿಪ್ಪಮ್ಮ ಮತ್ತು ಮಲ್ಲಮ್ಮಳಿಗೆ ಮಕ್ಕಳಿರುತ್ತಾರೆ .

ಸಾಕ್ಷಿಗೆ ವಿಭಾಗ ಪತ್ರವನ್ನು ಓದಿರುತ್ತೀರೋ ಅಥವಾ ಇಲ್ಲವೋ ಅಂತ ಪುನಃ ಪುನಃ 4 ಬಾರಿ ವಕೀಲರು ಪ್ರಶ್ನೆ ಕೇಳಿದ್ದು , ಸಾಕ್ಷಿಯು , 4 ಬಾರಿಯೂ , ಪತ್ರವು ಸುಳ್ಳು ಇರುತ್ತದೆ ಅಂತ ಸಾಕ್ಷಿ ನುಡಿದಿರುತ್ತಾರೆ . ಸದರಿ ವಿಭಾಗ ಪತ್ರದಲ್ಲಿ ಸ ನಂ 143, 64/1 , 71/1 ಬಿ ಹಂಚಿಕೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು , ಸುಳ್ಳು ಎಂದು ನುಡಿಯುತ್ತಾರೆ . ಸ ನಂ 143/1, 64/1 ರ ಜಮೀನುಗಳು ನಿಮ್ಮ ತಂದೆ ಮತ್ತು ಚಿಕ್ಕಪ್ಪನ ನಡುವೆ ವಿಭಾಗವಾಗಿರುತ್ತದೆ ಎಂದರೆ ಸಾಕ್ಷಿಯು , ಸುಳ್ಳು ಎಂದು ನುಡಿಯುತ್ತಾರೆ . ಸನಂ 143/1 ಮತ್ತು 64/1 ನೇದವುಗಳನ್ನು ನಿಮ್ಮ ಅಣ್ಣ , ನೀವು ಮತ್ತು ನಿಮ್ಮ ಚಿಕ್ಕಪ್ಪನ ಮಗ ಹಂಚಿಕೊಂಡಿರುತ್ತೀರಿ ಎಂದರೆ ಸರಿಯಲ್ಲ . ಸ ನಂ 71/1 ಬಿ ಜಮೀನನ್ನು ನಿಮ್ಮ ಅಣ್ಣ ಮತ್ತು ನೀವು ಹಂಚಿಕೆ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ .

ನೀವು ಪಂಚಾಯ್ತಿ ಪಾಲುಪಟ್ಟಿಗೆ ಸಹಿ ಮಾಡಿದ್ದರೂ , ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ . ಸ ನಂ 71/1 ಸಿ ನೇದನ್ನು ವಿಭಾಗ ಪತ್ರದಲ್ಲಿ ನೀವು ಸೇರಿಸಿಲ್ಲ ಎಂದರೆ ಸಾಕ್ಷಿಯು , ನಾವು ಈವರೆಗೂ ವಿಭಾಗ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ . ನೀವು ಆ ಬಗ್ಗೆ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ . ದಿಃ 17–8–2007 ರ ವಿಭಾಗ ಪತ್ರದಲ್ಲಿ , ಹಿಂದೆ ಆದ ವಿಭಾಗವನ್ನು ಬರೆಯಲಾಗಿದೆ ಎಂದರೆ ಸರಿಯಲ್ಲ . ನೀವು ಆ ಬಗ್ಗೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ .

ಸ ನಂ 71/1ಸಿ ಅನ್ನು ನಾನು ಮತ್ತು ನನ್ನ ಅಣ್ಣ ಕ್ರಯಕ್ಕೆ ಪಡೆದಿರುತ್ತೇವೆ . ಕ್ರಯಪತ್ರವನ್ನು ನನ್ನ ಅಣ್ಣನ ಹೆಸರಿಗೆ ಮಾಡಲಾಗಿರುತ್ತದೆ . ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕಿನಲ್ಲಿ ನಾವು 2006ನೇ ಸಾಲಿನಲ್ಲಿ ರೂ.50,000/- ಹಣ ಸಾಲವನ್ನು ನನ್ನ ಮತ್ತು ತಿಪ್ಪೇಸ್ವಾಮಿ ಹೆಸರಿಗೆ ಪಡೆದುಕೊಂಡಿದ್ದೆವು . ನನ್ನ ಅಣ್ಣ ನಿವೃತ್ತಿ ಹೊಂದಿದ ದಿನಾಂಕ ನನಗೆ ಗೊತ್ತಿಲ್ಲ . ನನ್ನ ಅಣ್ಣನ ಹೆಸರಿಗೆ 2007 ರಂದು ಜಮೀನು ಕ್ರಯಕ್ಕೆ ಪಡೆದಿರುತ್ತೇವೆಂದು ಸಾಕ್ಷಿ ನುಡಿದಿದ್ದು , ಸಾಕ್ಷಿ ಮುಂದುವರೆದು ಜಂಟಿಯಾಗಿ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ . ನಿಮ್ಮ ಅಣ್ಣ ನಿವೃತ್ತಿಯಿಂದ ಬಂದ ಹಣದಲ್ಲಿ ಸದರಿ ಆಸ್ತಿಯನ್ನು ಕ್ರಯಕ್ಕೆ ಪಡೆಯಲಾಗಿತ್ತು ಎಂದರೆ ಸರಿಯಲ್ಲ. ನಿಮ್ಮ ಅಣ್ಣ ಸದರಿ ಆಸ್ತಿಯನ್ನು ಸ್ವಂತಕ್ಕೆ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ . ಸ ನಂ 71/1ಸಿ ಯಲ್ಲಿ ನಿಮಗೆ ಯಾವುದೇ ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ .

ನಿಮ್ಮ ತಂದೆಯ ಆಸ್ತಿಗಳನ್ನು , ನೀವು ಮತ್ತು ನಿಮ್ಮ ಅಣ್ಣ ಹಂಚಿಕೆ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ . ಸ ನಂ 143 ಮತ್ತು 64 ನಿಮ್ಮ ತಾತನಿಂದ ಬಂದಂತಹ ಆಸ್ತಿಗಳನ್ನು , ನಿಮ್ಮ ತಂದೆ ಮತ್ತು ನಿಮ್ಮ ಚಿಕ್ಕಪ್ಪ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ .

ದಾವಾ ಆಸ್ತಿ ಐಟಂ ನಂ.1 ರಿಂದ 3 ಈಗಾಗಲೇ ವಿಭಾಗವಾಗಿದ್ದು , ನೀವು ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ . ನಿಮ್ಮಣ್ಣ ಜಮೀನನ್ನು ಕ್ರಯಕ್ಕೆ ಪಡೆದ ದಿನವೇ , ನೀವು ವಿಭಾಗ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ . ಆ ದಿನ 2 ಪತ್ರಗಳನ್ನು ಪಾವಗಡದಲ್ಲಿ ಬರೆಯಲಾಗಿದೆ, ಆ ದಿನ ನೀವು ಹಾಜರಿದ್ದೀರಿ ಎಂದರೆ ಸರಿಯಲ್ಲ . ನಿಮ್ಮ ಅಣ್ಣನ ಕ್ರಯಪತ್ರಕ್ಕೆ ಯಾರು ಸಹಿ ಮಾಡಿರುತ್ತಾರೆ , ಅವರೇ ಪಂಚಾಯ್ತಿ ಪಾರಿಕತ್ತಿಗೂ ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ .

ನನ್ನ ತಂದೆಯ ಮನೆ ಇರುತ್ತದೆ . ನಾನು ಮನೆಯಲ್ಲಿರುತ್ತೇನೆ , ನನ್ನ ಅಣ್ಣ ಹೊಲದಲ್ಲಿರುವ ಮನೆಯಲ್ಲಿರುತ್ತಾರೆ . ನಿಮ್ಮ ಮನೆಯಲ್ಲಿ ಅರ್ಧ ಭಾಗ ನೀವು ಇರುತ್ತೀರಿ ಮತ್ತು ಅರ್ಧ ಭಾಗ ಗುಂಡಣ್ಣ ಇರುತ್ತಾರೆ ಎಂದರೆ ಸರಿಯಲ್ಲ . ನಾವು ಇರುವ ಮನೆಯಲ್ಲಿ ತಿಪ್ಪೇಸ್ವಾಮಿಗೂ ಅರ್ಧ ಭಾಗ ಇರುತ್ತದೆ . ಸದರಿ ಮನೆಯ ಪಕ್ಕದಲ್ಲಿ ಖಾಲಿಜಾಗವಿರುತ್ತದೆ . ಜಾಗವನ್ನು ತಿಪ್ಪೇಸ್ವಾಮಿಗೆ ಕೊಟ್ಟು ನೀವು ಮನೆಯನ್ನು ತೆಗೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ . ನೀವು ಜಾಗವನ್ನು ನಿಮ್ಮ ಅಣ್ಣನಿಗೆ ಬಿಟ್ಟುಕೊಟ್ಟು , ನೀವು ಮನೆಯನ್ನು ತೆಗೆದುಕೊಂಡ ಬಗ್ಗೆ ದಾನಪತ್ರ ವನ್ನು ಬರೆದುಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ**
**ಪಾವಗಡ.**